ಓಎಸ್ ನಂಃ 383/2022 ಪಿ.ಡಬ್ಲ್ಯೂ.1

ದಿನಾಂಕಃ 06.08.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ.ಟಿ.ಎಲ್. ವಕೀಲರಿಂದಃ

ಕರಿಗೌಡರಿಗೆ ತನ್ನ ತಂದೆ ಸಂಪಾದನೆ ಮಾಡಿರುವ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಕರಿಗೌಡರಿಗೆ ಕ್ರಯ ಪತ್ರದ ಮೂಲಕ ಬಂದಿರುವ ಆಸ್ತಿಗಳ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅನುವೆಗೌಡ @ ಕರಿಗೌಡರವರು ಸುಮಾರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸದರಿ ವಿಚಾರವಾಗಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

2. 1 ನೇ ಪ್ರತಿವಾದಿ ಯಾವಾಗ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಕಂದಾಯ ಇಲಾಖೆಗೆ ಅರ್ಜಿ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಯಾವ ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 9 ನೇ ಪ್ರತಿವಾದಿ ಯಾವ ಆಸ್ತಿಯಲ್ಲಿ ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು 12 ವರ್ಷಗಳ ಹಿಂದೆ ಆಸ್ತಿಯಲ್ಲಿ ಭಾಗಾಂಶವನ್ನು ಕೇಳಿದ್ದು, ಕೊಡುತ್ತೇನೆ ಎಂದು ಮುಂದೂಡುತ್ತಾ ಬಂದಿದ್ದು, ಯಾವುದೇ ವಿಭಾಗ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಮಾವಿನಕೆರೆಯ ನನ್ನ ಮನೆಯಲ್ಲಿ ಆಸ್ತಿಯ ವಿಭಾಗವನ್ನು ಕೆಳಿರುತ್ತೇನೆ. ದೊಡ್ಡಗಾಡೇನಹಳ್ಳಿ ಗಿರೀಶ, ಬಲ್ಲೇನಹಳ್ಳಿಯ ಪ್ರಶಾಂತ ಹಾಗೂ ಕಬ್ಬಲರೆಗೆಪುರ ಜಗ್ಗನ ಇದ್ದರು ಸಮಯ ನನಗೆ ಗೊತ್ತಿರುವುದಿಲ್ಲ. ವಿಭಾಗ ಕೊಡುತ್ತೇನೆ ಎಂದು ಹೇಳಿ ನಿನಗೆ ಕೊಡುವುದಿಲ್ಲ ಎಂದು ನುಡಿದಿರುತ್ತಾರೆ.

3. ದಾವಾ ಆಸ್ತಿಗಳು ಹನುಮೆಗೌಡರಿಗೆ ಸೇರದ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವೆ ದಾಖಲು ಮಾಡುವ ಯಾವುದೇ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**